# ರಮ್ಯ ಊರಿಗೆ ಋತು ಪಯಣ

'ಸರಿ ಬಿಡು, ಹೋಗ್ಬಾ ಋತು, ನಿಂಗೂ ಹೊಸ ಜಾಗ ನೋಡಿದ ಹಾಗಾಗುತ್ತೆ, ನಂದಿಯನ್ನು ನಾನೂ ಒಂದ್ಸಾರಿ ನೋಡಿದ್ದೀನಿ, ದೊಡ್ಡದಾದ ನಂದಿ ದೇವಸ್ಥಾನ ತುಂಬಾ ಚೆನ್ನಾಗಿದೆ, ಶಾಂತವಾದ ಪರಿಸರ, ಆದ್ರೆ ನೀನಿನ್ನು ಹೆಜ್ಜೆಹೆಜ್ಜೆಗೂ ಹುಷಾರಾಗಿರ್ಬೇಕು ಋತು, ನಿಮ್ಮ ಬಂಗ್ಲೆಯಲ್ಲೇ ನಮ್ಮಿಬ್ಬರ ಪ್ರೀತಿಯನ್ನು ವಿರೋಧಿಸುವವರು ಇದ್ದಾರೆ ಅಂದ್ಮೇಲೆ ಅದಕ್ಕೆ ಕಾರಣ ಏನು ಅಂತಾನೂ ಯೋಚಿಸ್ಬೇಕಲ್ವಾ ನಾವು. ನೀನು ಕೋಟೆ ಬಂಗ್ಲೆಯ ರಾಜಕುಮಾರಿ, ಕೋಟ್ಯಾಂತರ ಬೆಲೆ ಬಾಳುವ ಆಸ್ತಿಯ ಉತ್ತರಾಧಿಕಾರಿಣಿ. ಇದಕ್ಕೂ, ನಮ್ಮ ಪ್ರೀತಿಯನ್ನು ವಿರೋಧಿಸುತ್ತಿರುವುದಕ್ಕೂ ಏನಾದ್ರೂ ಸಂಬಂಧ ಇರ್ಬಹುದಾ?....ನಂಗಂತೂ ಗೊತ್ತಿಲ್ಲ,  ಮೊದ್ಲು ಈ ಇನ್ವೆಸ್ಟಿಗೇಷನ್ ಮುಗಿದು ಬಿಡ್ಲಿ. ಮತ್ತೆ ನಾನು ಖಂಡಿತಾ ತಡ ಮಾಡಲ್ಲ, ನನ್ನ ಹುಡುಗಿಯನ್ನು ಈ ಕೋಟೆ ಬಂಗ್ಲೆಯಿಂದ ಹಾರಿಸಿಕೊಂಡು ಹೋಗಿ ನನ್ನ ಅರಮನೆಯಲ್ಲಿ ಜೋಪಾನವಾಗಿಡ್ತೀನಿ...' ಎಂದ ಹೇಮಂತ.

ಅವನಿಗೆ ತನ್ನ ಮೇಲಿರುವ ಅಪಾರ ಪ್ರೀತಿಯನ್ನು ನೋಡಿ ಋತುವಿಗೂ ಮನಸ್ಸು ತುಂಬಿ ಬಂತು.
'ಹೇಮಂತ್....ಐ ಲವ್ ಯೂ...' ಮೆಲ್ಲನೆ ಉಸುರಿದಳು.

